Ref.No.11/2024

MW-1,

**ದಿನಾಂಕಃ 05.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ.MKR ವಕೀಲರಿಂದ**

ನಿಎಂ-7 ಆರ್ಟಿಕಲ್ಸ್ ಚಾರ್ಜ್ ನಲ್ಲಿ ನನ್ನನ್ನು ಸಾಕ್ಷಿಯಾಗಿ ತೋರಿಸಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ನಿಎಂ-7 ನ್ನು ತಯಾರಿಸುವ ಮೊದಲು ಯಾವುದೇ ವರದಿಯನ್ನು ಶಿಸ್ತುಪಾಲನಾಧಿಕಾರಿಗೆ ಸಲ್ಲಿಸಿರುವುದಿಲ್ಲ. ಈ ಪ್ರಕರಣದ ಬೇರೆ ಯಾವುದೇ ದಾಖಲಾತಿಗಳು ನನ್ನ ಮೂಲಕ ಶಿಸ್ತುಪಾಲನಾಧಿಕಾರಿಗೆ ಹೋಗಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ದಾಖಲಾತಿಗಳನ್ನು ಓದಿದ ನಂತರ ಮಾಹಿತಿ ಇರುತ್ತದೆ. ಈ ಪ್ರಕರಣದ ದಾಖಲಾತಿಗಳನ್ನು ನಾನು ಈ ನ್ಯಾಯಾಧೀಕರಣದ ಮುಂದೆ ನನ್ನ ಸಾಕ್ಷವನ್ನು ನುಡಿದ ದಿನ ಅಂದರೆ ದಿಃ06.03.2025 ರಂದು ಪರಿಶೀಲಿಸಿರುತ್ತೇನೆ. ಈ ಪ್ರಕರಣದ ದಾಖಲಾತಿಗಳನ್ನು ನನ್ನ ಸುಪರ್ದಿಗೆ ನೀಡಿದ ಬಗ್ಗೆ 2 ನೇ ಪಾರ್ಟಿಯವರಿಂದ ಆದೇಶ ಇರುತ್ತದೆ. ಸದರಿ ಆದೇಶವನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ. ನಾನು ಮತ್ತು ಲಾ ಆಫೀಸರ್ ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದ ಮಾಹಿತಿಯನ್ನು ವಕೀಲರಿಗೆ ನೀಡಿರುತ್ತೇನೆ. ಈ ಮೇಲೆ ಹೇಳಿದ ಅಂಶಗಳನ್ನು ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ.

ನಾನು 1997 ರಿಂದ 2 ನೇ ಪಾರ್ಟಿ ಸಂಸ್ಥೆಯಲ್ಲಿ ಕರ್ತವ ನಿರ್ವಹಿಸುತ್ತಿದ್ದೇನೆ. ಹಾಜರಾತಿ ರಿಜಿಸ್ಟರುಗಳನ್ನು ನಾವೇ ನಿರ್ವಹಿಸುತ್ತೇವೆ, ಅದಕ್ಕೆ ನಿರ್ವಾಹಕರು ಮತ್ತು ಚಾಲಕರ ಸಹಿಯನ್ನು ಪಡೆದುಕೊಳ್ಳುವುದಿಲ್ಲ, ಸಾಕ್ಷಿದಾರರು ಮುಂದುವರೆದು ನಿರ್ವಾಹಕರು ಮತ್ತು ಚಾಲಕರ ಮೊಬೈಲ್ ಮೂಲಕ ತಮ್ಮ ಸಹಿಯನ್ನು ಹಾಕಿಕೊಳ್ಳುತ್ತಾರೆ ಹಾಗೂ ಆಯಾಯಾ ಕರ್ತವ್ಯಕ್ಕೆ ತೆರಳುವ ಮೊದಲು ಅವರವರ ಸಹಿಯನ್ನು ಪ್ರತ್ಯೇಕವಾಗಿ ಸಹಿ ಹಾಕಿಸಿ ತೆಗೆದಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಪ್ರತಿಯೊಬ್ಬ ನೌಕರರ ರಜೆ ರಿಜಿಸ್ಟರನ್ನು ನಮ್ಮ ಡಿಪೋದಲ್ಲಿ ನಿರ್ವಹಿಸುತ್ತೇವೆ, ಸಾಕ್ಷಿ ಮುಂದುವರೆದು ಸಿಎಲ್ ರಿಜಿಸ್ಟರ್ ಮಾತ್ರ ನಿರ್ವಹಿಸುತ್ತೇವೆ, ಉಳಿದಿದ್ದನ್ನು ಡಿವಿಸನಲ್ ಕಛೇರಿಯಲ್ಲಿ ನಿರ್ವಹಿಸಲಾಗುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ Inward - Outward ರಿಜಿಸ್ಟರನ್ನು ಡಿವಿಸನಲ್ ಕಛೇರಿಯಲ್ಲಿ ನಿರ್ವಹಿಸಲಾಗುತ್ತದೆ. ರಜೆ ಅರ್ಜಿಯನ್ನು ನೀಡಿದಂತಹ ಸಂದರ್ಭದಲ್ಲಿ ಅದರ ಮೇಲೆ ಹಿಂಬರಹವನ್ನು ಬರೆಯುವ ಪದ್ಧತಿ ಇರುತ್ತದೆ. ಆ ರೀತಿ ಪದ್ಧತಿ ಇರುವುದಿಲ್ಲ ಹಾಗೂ ಯಾವುದೇ ಹಿಂಬರಹವನ್ನು ಬರೆಯುವುದಿಲ್ಲ ಎಂದರೆ ಸರಿಯಲ್ಲ. ಹಿಂಬರಹವನ್ನು ನೀಡಿದ್ದಲ್ಲಿ Inward ರಿಜಿಸ್ಟರಿನಲ್ಲಿ ನಮೂದಿಸಬೇಕು ಎಂದರೆ ಸರಿ. ಮೇಲೆ ಹೇಳಿದಂತಹ ವಹಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಎಂ-1 ರೆಡಿಮೇಡ್ Proforma ದಲ್ಲಿ ಹೆಸರು ಮತ್ತು ದಿನಾಂಕಗಳನ್ನು ತುಂಬಿಸಲಾಗಿರುತ್ತದೆ ಎಂದರೆ ಸರಿ. ನಿಎಂ-1 ಡಿಪೋದಿಂದ ನಮ್ಮ

ಡಿವಿಸನ್ ಕಛೇರಿಗೆ ಕಳುಹಿಸಿದಂತಹ ದಾಖಲೆಯಾಗಿರುತ್ತದೆ. ನಿಎಂ-1 ಗೆ Inward ರವಾನೆ ಸಂಖ್ಯೆ ಹಾಕಿರುವುದಿಲ್ಲ, ಸಾಕ್ಷಿ ಮುಂದುವರೆದು ಅದರೊಂದಿಗೆ ಬಂದಂತಹ ಇನ್ನೊಂದು ದಾಖಲೆಯಲ್ಲಿ Inward ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ. ನಿಎಂ-1 ಮತ್ತು ನಿಎಂ-1(ಎ)ಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಿಎಂ-1(ಎ) ಆರ್ಟಿಕಲ್ಸ್ ಆಫ್ ಚಾರ್ಜ್ಸ್ ಗೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ ಎಂದರೆ ಸರಿ. ನಿಎಂ-4 ಮತ್ತು 5 ದಾಖಲಾತಿಗಳು 1 ನೇ ಪಾರ್ಟಿಯವರು ನೀಡಿರುವಂತಹ ದಾಖಲೆಗಳಾಗಿರುತ್ತವೆ ಎಂದರೆ ಸರಿ. ನಿಎಂ-5 ಮತ್ತು 6 ದಾಖಲಾತಿಗಳು ಕೋವಿಡ್ ನೆಗೆಟಿವ್ ದಾಖಲಾತಿಗಳಾಗಿರುತ್ತವೆ ಎಂದರೆ ಸರಿ. ನಿಎಂ-9 ದಾಖಲಾತಿ 1 ನೇ ಪಾರ್ಟಿ ತಂದೆಯವರು ಮರಣ ದೃಢೀಕರಣ ಪತ್ರವಾಗಿರುತ್ತದೆ ಎಂದರೆ ಸರಿ. 1 ನೇ ಪಾರ್ಟಿಯವರು ತಮ್ಮ ತಂದೆ ತೀರಿಕೊಂಡ ವಿಚಾರ ಹಾಗೂ ಅವರಿಗೆ ಕೋವಿಡ್ ಆಗಿರುವ ವಿಚಾರ ನಿಎಂ-10 ರಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ.

ನನಗೆ ಇನ್ನೂ 5 ವರ್ಷಗಳ ಸೇವಾವಧಿ ಇರುತ್ತದೆ. ಆದುದರಿಂದ ನನ್ನ ಹಿರಿಯ ಅಧಿಕಾರಿಗಳು ನನಗೆ ತೊಂದರೆ ಕೊಡಬಾರದು ಎಂದು ಅವರು ಹೇಳಿದಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪಾರ್ಟಿಯವರಿಂದಾಗಿ ರೂ.7,74,288/-2 ನೇ ಪಾರ್ಟಿ ಸಂಸ್ಥೆಗೆ ನಷ್ಟವಾಗಿರುತ್ತದೆ ಎಂದು ತೋರಿಸಲು ಈ ನ್ಯಾಯಾಧೀಕರಣದ ಮುಂದೆ ಯಾವುದೇ ದಾಖಲಾತಿ ಹಾಜರು ಪಡಿಸಿರುವುದಿಲ್ಲ. ಕೋವಿಡ್ ಸಮಯದಲ್ಲಿ ಒಂದೊಂದು ಸೀಟಿನಲ್ಲಿ ಒಬ್ಬೊಬ್ಬರೇ ಪ್ರಯಾಣಿಸಬೇಕೆಂದು ನಿಯಮವಿತ್ತು ಎಂದರೆ ಸರಿ. ನನಗೆ ಅಧಿಕೃತ ಮತ್ತು ಅನಧಿಕೃತ ಗೈರು ಹಾಜರು ಬಗ್ಗೆ ಗೊತ್ತಿರುತ್ತದೆ. ನಿಎಂ-13 ಶಿಕ್ಷಾದೇಶವನ್ನು ಮಾಡುವ ಕಾಲಕ್ಕೆ 1 ನೇ ಪಾರ್ಟಿಯವರು ಅನಧಿಕೃತ ಗೈರು ಹಾಜರು ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ ಎಂದರೆ ಸರಿ. 2 ನೇ ಪಾರ್ಟಿಯವರು ವರದಿಗಾರರ ವರದಿ, 1 ನೇ ಪಾರ್ಟಿಯವರು ಉತ್ತರ ಮತ್ತು ಆರ್ಟಿಕಲ್ಸ್ ಆಫ್ ಚಾರ್ಜ್ ಮೇಲೆ ಶಿಕ್ಷಾದೇಶವನ್ನು ಮಾಡಿರುತ್ತಾರೆ ಎಂದರೆ ಸರಿ. 2 ನೇ ಪಾರ್ಟಿಯವರು 1 ನೇ ಪಾರ್ಟಿಯವರು ಅನಧಿಕೃತ ಗೈರು ಹಾಜರು ಎಂಬ ತೀರ್ಮಾನಕ್ಕೆ ಬರದೇ ಶಿಕ್ಷಾದೇಶವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗೈರು ಹಾಜರಾತಿಯ ಅವಧಿಯ ಹಾಜರಾತಿ ವಹಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ. ನಿಎಂ-15 ರಲ್ಲಿ ಗೈರು ಹಾಜರಾತಿ ಎಂದು ನಮೂದಾಗಿರುತ್ತದೆ, ಅನಧಿಕೃತ ಗೈರು ಹಾಜರಾತಿ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. 1 ನೇ ಪಾರ್ಟಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನಿಂದ ಸುಳ್ಳು ಸಾಕ್ಷ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಎಲ್ಲಾ

Ref.No.11/2024

MW-1,

ದಾಖಲಾತಿಗಳ ಮೇಲೆ ನಾನು ರುಜು ಹಾಕಿರುತ್ತೇನೆ ಎಂದರೆ ಸರಿ. ಆ ರೀತಿ ರುಜು ಹಾಕಲು ನನಗೆ 2 ನೇ ಪಾರ್ಟಿಯವರು ಮೌಖಿಕ ಆದೇಶ ನೀಡಿರುತ್ತಾರೆ ಎಂದರೆ ಸರಿ. ನಾನು ಈ ನ್ಯಾಯಾಧೀಕರಣದ ಮುಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವರದಿಯನ್ನು ಸಲ್ಲಿಸಿದ ಘಟಕಾ ವ್ಯವಸ್ಥಾಪಕರು, ಚಿಕ್ಕಮಗಳೂರು, ರವರು ಯಾರೆಂದು ನನಗೆ ಗೊತ್ತಿಲ್ಲ. 1 ನೇ ಪಾರ್ಟಿಯವರು ಯಾವುದೇ ತಪ್ಪು ಮಾಡದೇ ಇದ್ದರೂ, ನಿಎಂ-7 ಕ್ಕೂ 1 ನೇ ಪಾರ್ಟಿಯವರಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.